4. ಎಷ್ಟು ಅನಧಿಕೃತ ಗಿಮಿನ್ಯೂ ಕಾಲೋನಿಗಳಿವೆ; ಇವುಗಳನ್ನು ಅಧಿಕೃತಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

1. ಮೈಸೂರು ತಾಲ್ಲೂಕಿನಲ್ಲಿ 165 ಗ್ರಾಮಗಳಿರುತ್ತವೆ. ಇವುಗಳ ವಿಸ್ತೀರ್ಣ 676.14 ಚದರ ಕಿ.ಮೀ. ಈ ಗ್ರಾಮಗಳನ್ನು ಪುನಃ ಕಂದಾಯ ಗ್ರಾಮಗಳೆಂದು ಪರಿವರ್ತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

2. ಉದ್ಭವಿಸುವುದಿಲ್ಲ.

3. ಈ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನಿನಲ್ಲಿ ಒಟ್ಟು 573 ಜನರು ಮನೆ ಕಟ್ಟಿರುತ್ತಾರೆ.

4. 28 ಅನಧಿಕೃತ ಕಾಲೋನಿಗಳಿವೆ. ಅಧಿಕೃತಗೊಳಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ಚಾಮರಾಜನಗರ ತಾಲ್ಲೂಕಿನಲ್ಲಿ ರಾಜೀವ್‌ಗಾಂಧಿ ಯೋಜನೆಯಡಿ ಮನೆಗಳ ನಿರ್ಮಾಣ

2053(2510)

ಶ್ರೀ ಗುರುಸ್ವಾಮಿ ಸಿ.: ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಾಮರಾಜನಗರ ಊರ ಕೆರೆಯಲ್ಲಿ 220 ಮನೆಗಳನ್ನು ರಾಜೀವ್ ಗಾಂಧಿ ಯೋಜನೆಯಡಿ ಕೇಂದ್ರಸರ್ಕಾರದವರು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಬಂದಿದ್ದಲ್ಲಿ, ಅನುಮತಿ ನೀಡಲಾಗಿದೆಯೇ? (ವಿವರ ನೀಡುವುದು)

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಹಾಸನ ಹಾಲು ಒಕ್ಕೂಟದಲ್ಲಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸದೆ ಮುಂಬಡ್ತಿ ನೀಡಿರುವುದ